ಪುರದಲ್ಲಿ ಒಂದು ರಿಸರ್ಚ್ ಇನ್‌ಸ್ಟಿಟ್ಯೂಟ್ ಇದೆ. ಈಗ ಇವರ ಕ್ಷೇತ್ರಕ್ಕೆ ಹೊಸದಾಗಿ ಸಿಲ್ಕ್ ಫಾರಂ ಮಾಡಿಸಿಕೊಡಬೇಕೆಂದು ಕೇಳುತ್ತಿದ್ದಾರೆ.....

ಶ್ರೀ ಕೆ. ಜಿ. ಶ್ರೀನಿವಾಸಮೂರ್ತಿ.—ಈ ವರ್ಷದಲ್ಲೇ ಈ ಫಾರಂ ಮಾಡಿಸುವುದಕ್ಕೆ ಕ್ರಮ ಕೈಗೊಳ್ಳುತ್ತೀರಾ ? ಏಕೆಂದರೆ ೧೫೦ ಎಕರೆ ಜಮೀನು ಸರ್ಕಾರಕ್ಕೆ ಸಂಬಂಧಪಟ್ಟಿದ್ದು ಹಾಗೆಯೇ ಬೀಳು ಬಿದ್ದಿದೆ. ಆದ್ದರಿಂದ ಸರ್ಕಾರದವರು ಇದನ್ನು ಗಮನಿಸಬೇಕು.

ಶ್ರೀಮತಿ ಚಂದ್ರಪ್ರಭಾ ಅರಸ್.—ಇದನ್ನು ಪರಿಶೀಲಿಸುತ್ತೇನೆ.

ನೆಲಮಂಗಲ ತಾಲ್ಲೂಕಿನಲ್ಲಿ ಕುಮದ್ವತಿ ನದಿಗೆ ಅಡ್ಡಲಾಗಿ ಅಣೆಕಟ್ಟೆಯೊಂದರ ನಿರ್ಮಾಣ.

೧೫೫೩. ಶ್ರೀ ಎಂ. ಜಿ. ಸತ್ಯನಾರಾಯಣ (ನೆಲಮಂಗಲ).—

ಅ) ನೆಲಮಂಗಲ ತಾಲ್ಲೂಕು ಮರಸರಳ್ಳಿ ಗ್ರಾಮದ ಸಮೀಪ ಕುಮದ್ವತಿ ನದಿಗೆ ಅಣೆಕಟ್ಟು ಕಟ್ಟಲು ಹಿಂದಿನ ದಿವಾನರಾಗಿದ್ದ ರಾಷ್ಟ್ರ ಶಿಲ್ಪಿ ದಿವಂಗತ ಸರ್ ಎಂ. ವಿಶ್ವೇಶ್ವರಯ್ಯನವರ ಆದೇಶದಂತೆ ಸರ್ವೆಕ್ಷೆ ಹಾಗೂ ಇತರ ಕಾರ್ಯಗಳಾಗಿದ್ದು ಇಲ್ಲಿಯವರೆಗೆ ಈ ಅಣೆಕಟ್ಟು ಕಟ್ಟುವ ಕಾರ್ಯ ಆಗದಿರಲು ಕಾರಣವೇನು ?

ಆ) ಈ ಅಣೆಕಟ್ಟೆಯಾದರೆ ಸುಮಾರು ೧೫೦೦೦ ಎಕರೆ ಜಮೀನಿಗೆ ನೀರನ್ನು ಒದಗಿಸಲು ಸಾಧ್ಯವಾಗುತ್ತದೆ ಎಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಇ) ಈ ಕಾರ್ಯ ಆಗಲು ಸರ್ಕಾರದಿಂದ ಏನಾದರೂ ನಿರ್ಬಂಧವಿದೆಯೇ ?

ಈ) ಹಾಗಿದ್ದಲ್ಲಿ ಸಾರ್ವಜನಿಕ ದೃಷ್ಟಿಯಿಂದ ಈ ನಿರ್ಬಂಧವನ್ನು ತೆಗೆದು ಹಾಕಿ ಈ ಕಾಮಗಾರಿಯನ್ನು ೮೫-೮೫ನೇ ಸಾಲಿನಲ್ಲಿಯೇ ಪ್ರಾರಂಭಿಸಲಾಗುವುದೆ ?

ಶ್ರೀ ಆರ್. ಎನ್. ಲಕ್ಷ್ಮೀಪತಿ (ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು).—

ಅ) ಅಣೆಕಟ್ಟು ಕಟ್ಟಲು ದಿವಂಗತ ಸರ್. ಎಂ. ವಿಶ್ವೇಶ್ವರಯ್ಯನವರು ಕೊಟ್ಟ ಆದೇಶದ ಮಾಹಿತಿ ಇಲ್ಲ.

ಆ) ಬಂದಿಲ್ಲ.

ಇ) ನಿರ್ಬಂಧ ಇದೆ.

ಈ) ಇಲ್ಲ.

ಶ್ರೀ ಎಂ. ಜಿ. ಸತ್ಯನಾರಾಯಣ.—ಮಾನ್ಯ ಅಧ್ಯಕ್ಷರೇ, ನನ್ನ ಮೊದಲನೆಯ ಪ್ರಶ್ನೆಗೆ ಮಾನ್ಯ ಸಚಿವರು ಮಾಹಿತಿ ಇಲ್ಲ ಎಂದು ಹೇಳಿದ್ದಾರೆ. ಆದರೆ ಹಿಂದೆ ಇದೇ ವಿಚಾರದಲ್ಲಿ ಅಣೆಕಟ್ಟನ್ನು ಕಟ್ಟಲು ಸೆಕ್ರೆಟರಿಯೇಟ್‌ನಲ್ಲಿ ಫೈಲ್ ಬಿಲ್ಡಪ್ ಆಗಿ ಕಾವೇರಿ ಎರಡನೆಯ ಹಂತ ಮುಗಿದಮೇಲೆ ತೆಗೆದುಕೊಳ್ಳುವುದಾಗಿ ತೀರ್ಮಾನವಾಗಿತ್ತು. ಆದರೆ ಕಾವೇರಿ ಎರಡನೆಯ ಹಂತ ಮುಗಿದರೂ ಕೂಡ ಇದು ಹಾಗೆಯೇ ಉಳಿದುಕೊಂಡಿರುವುದು ಮಾ ಮಂತ್ರಿಗಳ ಗಮನಕ್ಕೆ ಬಂದಿಲ್ಲವೇ ಎಂದು ಕೇಳುತ್ತೇನೆ ? ಎರಡನೆಯದಾಗಿ ಈ ಅಣೆಕಟ್ಟನ್ನು ಕಟ್ಟುವುದರಿಂದ ಸುಮಾರು ೧೫,೦೦೦ ಎಕರೆ ಜಮೀನಿಗೆ ನೀರನ್ನು ಒದಗಿಸಲು ಅವಕಾಶವಾಗುತ್ತದೆಂದು ಹೇಳಿಕೊಂಡರೂ, ಇದು ಗಮನಕ್ಕೆ ಬಂದಿಲ್ಲವೆಂದು ಹೇಳಿರುತ್ತಾರೆ. ಮೂರನೆಯದಾಗಿ ನಿರ್ಬಂಧವಿದೆ ಎಂದು ಹೇಳಿರುತ್ತಾರೆ. ಈ ನಿರ್ಬಂಧ ಎಲ್ಲಿಯತನಕ ಇರುತ್ತದೆ ? ಇದು ಯಾವಾಗ ಪ್ರಾರಂಭವಾಯಿತು ಮತ್ತು ಎಲ್ಲಿಯತನಕ ನಿರ್ಬಂಧವಿರುತ್ತದೆ ಎಂಬುದನ್ನು ದಯವಿಟ್ಟು ಮಾನ್ಯ ಸಚಿವರು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಮಾನ್ಯ ವಿಶ್ವೇಶ್ವರಯ್ಯನವರು ಅಣೆಕಟ್ಟನ್ನು ಕಟ್ಟಬೇಕೆಂಬ ಮಾಹಿತಿಯನ್ನು ಕೊಟ್ಟಿರತಕ್ಕಂಥದ್ದು ನಮ್ಮಲ್ಲಿ ಸಿಗುತ್ತಿಲ್ಲ. ಬೆಂಗಳೂರು ನಗರಕ್ಕೆ ನೀರನ್ನು ಸರಬರಾಜು ಮಾಡುತ್ತಿರುವ ಚಾಮರಾಜಸಾಗರ ಏನು ಇದೆ. ಇದು ಕುಮದ್ವತಿ ನದಿಯ ಕ್ಯಾಚ್‌ಮೆಂಟ್ ಏರಿಯಾದಲ್ಲಿಬರುತ್ತದೆ. ಅಪ್‌ಸ್ಟ್ರೀಮ್‌ಗೆ ಕಟ್ಟೆಯನ್ನು ಕಟ್ಟಲು ಅವಕಾಶವನ್ನು ಕೊಟ್ಟರೆ ಬೆಂಗಳೂರಿಗೆ ನೀರನ್ನು ಸರಬರಾಜು ಮಾಡಲು ತೊಂದರೆಯಾಗುತ್ತದೆ. ಆದ್ದರಿಂದ ಕುಮದ್ವತಿ ನದಿಗೆ ಅಣೆಕಟ್ಟನ್ನು ಕಟ್ಟತಕ್ಕಂಥ ಆಲೋಚನೆ ಮಾಡಬಾರದೆಂದು ಚೀಫ್ ಇಂಜಿನಿಯರ್‌ರವರು ಹೇಳಿದ್ದರಿಂದ ಇದನ್ನು ಅಷ್ಟಕ್ಕೆ ನಿಲ್ಲಿಸಿರುತ್ತೇವೆ.

ಶ್ರೀ ಎಂ. ಜಿ. ಸತ್ಯನಾರಾಯಣ.—ಕೇವಲ ಚೀಫ್ ಇಂಜಿನಿಯರ್‌ರವರ ಆದೇಶದಿಂದಲೇ ಸರ್ಕಾರ ನಡೆಯುತ್ತಿದೆ ಎಂದು ಹೇಳಲು ಆಗುವುದಿಲ್ಲ. ಬೆಂಗಳೂರು ಪಟ್ಟಣಕ್ಕೆ ತಿಪ್ಪಗೊಂಡನಹಳ್ಳಿಯಿಂದ ಬರತಕ್ಕಂಥ ನೀರೇ ಅಲ್ಲ. ಕಾವೇರಿಯಿಂದಲೂ ಬೆಂಗಳೂರು ನಗರಕ್ಕೆ ನೀರು ಬರುತ್ತಿದೆ. ಕಾವೇರಿ ಎರಡನೇ ಹಂತ ಮುಗಿದಮೇಲೆ ಈ ಒಂದು ಕೆಲಸವನ್ನು ತೆಗೆದು ಕೊಳ್ಳುವುದಾಗಿ ಹೇಳಿದ್ದರು, ಇಲ್ಲಿಯವರೆಗೆ ತೆಗೆದುಕೊಂಡಿಲ್ಲ.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಚೀಫ್ ಇಂಜಿನಿಯರ್‌ರವರು ತಮ್ಮ ಸ್ವಾರ್ಥಕ್ಕೋಸ್ಕರವಾಗಿ ಹೇಳಲಿಲ್ಲ. ಬೆಂಗಳೂರು ನಗರದ ಜನರ ಹಿತದೃಷ್ಟಿಯಿಂದ ಹೇಳಿದ್ದಾರೆ.

ಶ್ರೀ ಎಂ. ಜಿ. ಸತ್ಯನಾರಾಯಣ.—ರೈತರನ್ನು ನಿರ್ಲಕ್ಷ ಮಾಡಬಾರದೆಂದು ಹೇಳುತ್ತೇನೆ.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಬೆಂಗಳೂರು ಜನರ ಹಿತದೃಷ್ಟಿಯನ್ನು ನೋಡಬೇಕಾಗಿದೆ. ಕಾವೇರಿ ಎರಡನೆಯ ಹಂತ ಬಂದರೂ ಕೂಡ ಅಫ್‌ಸ್ಪ್ರಿಂಗ್‌ಗೆ ಅಣೆಕಟ್ಟನ್ನು ಕಟ್ಟಲು ಸಾಧ್ಯವಾಗುವುದಿಲ್ಲ.

ಶ್ರೀ ಕೆ. ಎಚ್. ರಂಗನಾಥ್.—ತಿಪ್ಪಗೊಂಡನಹಳ್ಳಿ ಚಾಮರಾಜಸಾಗರದಲ್ಲಿ ಹೋದ ವರ್ಷ ಎಷ್ಟು ನೀರು ಇತ್ತು, ಈ ವರ್ಷ ಎಷ್ಟು ನೀರು ಇರುತ್ತದೆ. ಈ ವರ್ಷ ಏತಕ್ಕೆ ನೀರು ಕಡಿಮೆ ಆಯಿತು. ಕಡಿಮೆ ಆಗಿರುವುದನ್ನು ಸರಿಮಾಡಲು ಏನು ವ್ಯವಸ್ಥೆಯನ್ನು ಮಾಡಿರುತ್ತೀರಿ ?

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಈಗ ತಿಪ್ಪಗೊಂಡನಹಳ್ಳಿ ಕೆರೆಗೆ ಏನು ನೀರು ಬರುತ್ತಿದೆ ಅದು ಅಷ್ಟು ಪೂರ್ತಿಯಾಗಿ ಬಂದರೂ ಕೂಡ ಸಾಲದಾಗುತ್ತದೆ.

ಶ್ರೀ ಕೆ. ಎಚ್. ರಂಗನಾಥ್.—ಕಡಿಮೆ ಇದ್ದರೆ ಇನ್ನೂ ಎಷ್ಟು ಕ್ಯೂಸೆಕ್ಸ್ ನೀರು ಬರಬೇಕು.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ವಿವರಗಳಿಗೆ ಮಾಹಿತಿಯನ್ನು ತರಿಸಿಕೊಡುತ್ತೇನೆ.

ಶ್ರೀ ಪಿ. ರಾಮಚಂದ್ರಪ್ಪ.—ಹಿಂದೆ ಬೆಂಗಳೂರು ನಗರಕ್ಕೆ ನೀರನ್ನು ಒದಗಿಸುವುದರ ಬಗ್ಗೆ ಒಂದು ಒಪ್ಪಂದವಾಗಿದೆ. ನದಿಗೆ ಯಾವುದೇ ಅಣೆಕಟ್ಟನ್ನು ಕಟ್ಟಬಾರದು ಪೂರ್ತಿ ನೀರು ತಿಪ್ಪಗೊಂಡನಹಳ್ಳಿಗೆ ಹೋಗಬೇಕೆಂದೂ ಕೂಡ ಒಪ್ಪಂದವಾಗಿದೆ. ಆ ಒಪ್ಪಂದ ಜಾರಿಯಲ್ಲಿದೆ. ಇದಕ್ಕೆ ಚ್ಯುತಿ ಬಾರದ ಹಾಗೆ ನೋಡಿಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಸರ್ಕಾರದ ಕರ್ತವ್ಯ ಮಾಡಲೇಬೇಕಾಗುತ್ತದೆ. ಕಾಪಾಡಲೇಬೇಕಾಗುತ್ತದೆ.

ಶ್ರೀ ಎಚ್. ಡಿ. ದೇವೇಗೌಡ.—ನಿರ್ಭಂಧ ಹಾಕಿರತಕ್ಕಂಥದ್ದು ಯಾವುದೋ ಒಂದು ಕಾಲದಲ್ಲಿ. Cauvery first stage, second stage, and thtid stage, afterall, the water that is going to be stored in Tippagondanhalli is a very small quantity. ಆದ್ದರಿಂದ ಮೇಲ್‌ಭಾಗದಲ್ಲಿರತಕ್ಕಂಥ ರೈತರಿಗೆ ಮೂರನೆ ಹಂತವಾದಮೇಲೆ ಏನಾದರೂ ರಿವ್ಯೂ ಮಾಡತಕ್ಕಂಥ ಯೋಜನೆ ಮಾಡೋಣ. ಇವತ್ತೇ ಇದರ ಬಗ್ಗೆ ನಿಖರವಾಗಿ ಹೇಳುವುದಕ್ಕೆ ಆಗುವುದಿಲ್ಲ. ಅಫ್ರೀರತಕ್ಕಂಥ ಫಾರ್ಮರ್ಸ್ ನಾವು ಹೋದಾಗಲೆಲ್ಲ ರೆಪ್ರಸೆಂಟೇಷನ್ ಕೊಡುತ್ತಿರುತ್ತಾರೆ. ಸರ್ಕಾರ ಅದರ ಬಗ್ಗೆ ಯೋಚನೆ ಮಾಡಬೇಕಾಗಿದೆ. ಈ ನಿಮಿಷದಲ್ಲೇ ಏನೂ ಹೇಳುವುದಕ್ಕೆ ಆಗುವುದಿಲ್ಲ.

ಶ್ರೀ ಎಚ್. ಡಿ. ಚನ್ನಪ್ಪ.—ಈ ಪ್ರದೇಶಕ್ಕೆ ಬೇರೆ ನೀರಾವರಿ ಸೌಲಭ್ಯವನ್ನು ಮಾಡಿಕೊಡುವುದಕ್ಕೆ ಅವಕಾಶವಿಲ್ಲವೇ ? ಬೆಂಗಳೂರಿಗೆ ನೀರನ್ನು ಕೊಡಿಸುವುದಾದರೆ ಇವರ ಗತಿ ಏನಾಗಬೇಕು. ಇವರಿಗೆ ಏನಾದರೂ ಬೇರೆ ವ್ಯವಸ್ಥೆಯನ್ನು ಮಾಡಿಕೊಡಬೇಕೆಂದು ಹೇಳುತ್ತೇನೆ.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ವ್ಯವಸ್ಥೆ ಮಾಡುವುದಕ್ಕೆ ಅವಕಾಶವಿದ್ದರೆ ಅದನ್ನು ಖಂಡಿತವಾಗಿಯೂ ಮಾಡೋಣ.

೨೦೫ (೫೭೯) ಶ್ರೀ ಎ. ಎ. ನಿರಂಜಾಳ್ಳ (ಸದಲಗ).—ಸಮಾಜ ಕಲ್ಯಾಣ ಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ.—